# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 999 |
| ಮಾನ್ಯ ಸದಸ್ಯರ ಹೆಸರು | : | ಡಾ:ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 20.08.2025 |
| ಉತ್ತರಿಸಬೇಕಾದ ಸಚಿವರು | : | ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜಾನುವಾರು ಗಣತಿ ನಡೆದಿದೆಯೇ; ಇದು ಎಷ್ಟನೇ ಗಣತಿ; ಕುರಿ, ಕೋಳಿ, ಮೇಕೆ, ಎಮ್ಮೆ, ಹಸು. ಹಂದಿ ಇತ್ಯಾದಿ; (ಜಾನುವಾರು ಗಣತಿಯ ವಿವರ ನೀಡುವುದು) | ರಾಷ್ಟ್ರವ್ಯಾಪ್ತಿಯಂತೆ 21ನೇ ಜಾನುವಾರು ಗಣತಿಯು 2024-25ನೇ ಸಾಲಿನಲ್ಲಿ ನಡೆದಿದ್ದು, ಸದರಿ ಗಣತಿಯ ಅಂತಿಮ ಅಂಕಿ-ಅಂಶಗಳು ಭಾರತ ಸರ್ಕಾರದಿಂದ ಬಿಡುಗಡೆಯಾಗಿರುವುದಿಲ್ಲ.<br><br>2019 ರಲ್ಲಿ ನಡೆದ 20ನೇ ಜಾನುವಾರು ಗಣತಿಯ ಪ್ರಕಾರ ವಿವಿಧ ಜಾನುವಾರುಗಳ ಸಂಖ್ಯೆ ಕೆಳಕಂಡಂತಿವೆ. |

| ಕ್ರ.ಸಂ | ಜಾನುವಾರುಗಳು | ಸಂಖ್ಯೆ |
|---|---|---|
| 1 | ದನ | 8469004 |
| 2 | ಎಮ್ಮೆ | 2984560 |
| 3 | ಕುರಿ | 11050728 |
| 4 | ಮೇಕೆ | 6169392 |
| 5 | ಹಂದಿ | 323836 |
| 6 | ನಾಯಿ | 1288864 |
| 7 | ಕುದುರೆ ಮತ್ತು ಪೋನಿ | 7018 |
| 8 | ಹೇಸರಗತ್ತೆ | 51 |
| 9 | ಕತ್ತೆ | 8790 |
| 10 | ಮೊಲ | 29200 |
| 11 | ಒಂಟೆ | 33 |
| 12 | ಆನೆ | 77 |
| | **ಒಟ್ಟು ಜಾನುವಾರುಗಳು** | **30331553** |
| | **ಒಟ್ಟು ಕುಕ್ಕುಟಗಳು** | **59494481** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದಲ್ಲಿ ದೇಸಿಯ ಹೆಣ್ಣು ಹಸುಗಳು ಎಷ್ಟಿವೆ; ಅತಿ ಹೆಚ್ಚು ಹಾಲು ಉತ್ಪಾದನೆಗೆ ದೇಸಿಯ ಹಸುಗಳು ಯೋಗ್ಯವೇ; ದೇಸಿಯ ಹಸುಗಳಿಗೆ ಕೃತಕ ಗರ್ಭದಾರಣೆ ಮಾಡಲಾಗುತ್ತಿದೆಯೇ; ಇದರಿಂದಾಗುವ ಪ್ರಯೋಜನಗಳೇನು; | 20ನೇ ಜಾನುವಾರು ಗಣತಿಯ ಪ್ರಕಾರ ರಾಜ್ಯದಲ್ಲಿ 5075798 ದೇಸಿ ಹೆಣ್ಣು ರಾಸುಗಳಿರುತ್ತವೆ ದೇಸಿಯ ಹಸುಗಳು ಕಡಿಮೆ ಹಾಲು ಉತ್ಪಾದಿಸುವ ರಾಸುಗಳಾಗಿರುವುದರಿಂದ ಅತಿ ಹೆಚ್ಚು ಹಾಲು ಉತ್ಪಾದನೆಗೆ ಯೋಗ್ಯವಲ್ಲ.<br><br>ದೇಸಿಯ ಹಸುಗಳಿಗೆ ಕೃತಕ ಗರ್ಭದಾರಣೆ ಮಾಡಲಾಗುತ್ತದೆ. ಅದರಿಂದಾಗುವ ಪ್ರಯೋಜನೆಗಳು ಕೆಳಕಂಡಂತಿವೆ.<br><br>1) ಉತ್ಕೃಷ್ಟ ಶುದ್ಧ ದೇಶಿ ತಳಿಯ ಹೋರಿಗಳಿಂದ ಉತ್ಪಾದಿಸಲಾದ ಘನೀಕೃತ ವೀರ್ಯನಳಿಕೆಗಳನ್ನು ಉಪಯೋಗಿಸಿ ಕೃತಕ ಗರ್ಭಧಾರಣೆ ಮಾಡುವುದರಿಂದ ಶುದ್ಧ ದೇಶಿ ತಳಿಯ ಗಂಡು ಮತ್ತು ಹೆಣ್ಣು ರಾಸುಗಳನ್ನು ಪಡೆಯಬಹುದಾಗಿರುತ್ತದೆ. |

| | | |
|---|---|---|
| | | 2) ಶುದ್ಧ ದೇಶಿ ತಳಿಯ ಜಾನುವಾರುಗಳ ಸಂಖ್ಯೆಯನ್ನು ಹೆಚ್ಚಿಸುವುದರೊಂದಿಗೆ ದೇಶಿ ತಳಿಯ ಜಾನುವಾರುಗಳ ಸಂರಕ್ಷಣೆ ಮಾಡಬಹುದಾಗಿರುತ್ತದೆ. |
| ಇ) | ಮಿಶ್ರ ತಳಿಗಳಿಂದ ಮೂಲ ದೇಸಿಯ ತಳಿಗಳು ನಾಶವಾಗುವುದಿಲ್ಲವೇ; ಮೂಲ ತಳಿ ಉಳಿವಿಗಾಗಿ ಕೈಗೊಂಡ ಕ್ರಮವೇನು? | ಮಿಶ್ರ ತಳಿಗಳಿಂದ ಮೂಲ ದೇಸೀಯ ತಳಿಗಳು ನಾಶವಾಗುವ ಸಾಧ್ಯತೆಗಳು ಇರುವುದಿಲ್ಲ. ಹಾಗೂ ದೇಸೀಯ ತಳಿ ಉಳಿವಿಗಾಗಿ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

**ಸಂಖ್ಯೆ:ಪಸಂಮೀ 213 ಸಲೆವಿ 2025**

(ಕೆ. ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

**ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 953(999) ಕ್ಕೆ ಅನುಬಂಧ**

**ಮೂಲ ತಳಿ ಉಳಿವಿಗಾಗಿ ಕೈಗೊಂಡಿರುವ ಕ್ರಮಗಳ ವಿವರ**

| ಕ್ರಮ ಸಂಖ್ಯೆ | ವಿವರ |
|---|---|
| 1 | ದೇಶಿ ಗೋ ತಳಿಗಳ ಸಂಕ್ಷಣೆ ಮತ್ತು ಅಭಿವೃದ್ಧಿಗೆ ಕ್ಷೇತ್ರಗಳನ್ನು (Farms) ನಿರ್ವಹಣೆ ಮಾಡಲಾಗುತ್ತಿದೆ |
| 2 | ಉತ್ಕೃಷ್ಟ ತಳಿಗುಣಗಳ ಶುದ್ಧ ದೇಶಿ ಗೋ ತಳಿಯ ಹೋರಿಗಳನ್ನು ಇಲಾಖಾ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. |
| 3 | ದೇಶಿ ತಳಿಗಳ ರಾಸುಗಳ ವೀರ್ಯ ಸಂಸ್ಕರಣೆಗೆ ದೇಶಿ ತಳಿಗಳ ಉತ್ಕೃಷ್ಟ ಗಂಡು ಕರುಗಳನ್ನು ಸಂವರ್ಧನಾ ಕ್ಷೇತ್ರಗಳಲ್ಲಿ ಉತ್ಪಾದಿಸಿ ವೀರ್ಯ ಸಂಸ್ಕರಣಾ ಕೇಂದ್ರಗಳಿಗೆ ನೀಡಲಾಗುತ್ತಿದೆ |
| 4 | ದೇಶಿ ಗೋತಳಿಗಳ ರಾಸುಗಳ ಸಂರಕ್ಷಣೆಗಾಗಿ ಸ್ಥಳಿಯವಾಗಿ ರೈತರಿಗೆ ದೇಶೀ ಗೋತಳಿಯ ರಾಸುಗಳ ತಳಿ ಅಭಿವೃದ್ಧಿಪಡಿಸಲು ಅಗತ್ಯವಾದ ಗಂಡುಕರುಗಳು ಹೋರಿಗಳನ್ನು ಒದಗಿಸಲಾಗುತ್ತಿದೆ. |
| 5 | ದೇಶಿ ಗೋತಳಿಯ ರಾಸುಗಳ ಸಂರಕ್ಷಣೆಗಾಗಿ ಪಾರಂಪರಿಕವಾಗಿ ಮೀಸಲಿಡಲಾದ ಕಾವಲು ಭೂಮಿಯ ನಿರ್ವಹಣೆ. ಸದರಿ ಕಾವಲುಗಳಲ್ಲಿ ನಿಗದಿತ ತಳಿಯ ರಾಸುಗಳ ಪಾರಂಪರಿಕ ಪದ್ಧತಿಯ ಸಂಗೋಪನೆ, ಕಾವಲು ಭೂಮಿಯನ್ನು ಮೇವಿನ ಬೆಳೆಗಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ |
| 6 | ರಾಜ್ಯದಲ್ಲಿ ದೇಶಿ ಗೋತಳಿಗಳ ಸಾಕಾಣಿಕೆ , ಸಂವರ್ಧನೆ ಮತ್ತು ನಿರ್ವಹಣೆ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ |
| 7 | ದೇಶಿ ಗೋತಳಿ ಸಂರಕ್ಷಣೆ ಮತ್ತು ಸಂವರ್ಧನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡಲಾಗುತ್ತಿದೆ |
| 8 | ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕೃತಕ ಗರ್ಭಧಾರಣೆ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ದೇಶಿ ಗೋತಳಿಗಳ ಸಂಖ್ಯೆಯನ್ನು ವೃದ್ಧಿಸಲಾಗುತ್ತಿದೆ |

**ನಿರ್ದೇಶಕರು.**

**ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ**